ಭಾಷಾ ವೈವಿಧ್ಯತೆ: ಕನ್ನಡ ಭಾಷೆಯಲ್ಲಿ ಹೆಣ್ಣು ಭಾಷೆಯ ಅನನ್ಯತೆ

ರೇಖಾ* & **ನರೇಂದ್ರ ರೈ ದೇರ್ಲ****

DOI: https://doi.org/10.5281/zenodo.21189290

ABSTRACT

ವಿಕಾಸಗೊಂಡ ಮನುಷ್ಯನಲ್ಲಿ ಭಾಷೆ ಯಾವಾಗ ಉಗಮವಾಯಿತು ಎಂಬುದು ಇನ್ನೂ ಚರ್ಚೆಯಲ್ಲಿದೆ. ಆದರೆ ವಿಕಾಸಗೊಂಡ ಮರುಗಳಿಗೆಯೇ ಆತನಲ್ಲಿ ಭಾಷೆಯ ಅಸ್ತಿತ್ವವನ್ನು ಕಾಣಬಹುದು. ಪ್ರಾಣಿಪ್ರಭೇದದಿಂದ ಮನುಷ್ಯನಾಗುವ ಮೊದಲ ಹಂತವೇ ಆತನ ಮೆದುಳಿನ ರಚನೆಯಲ್ಲಾದ ಬದಲಾವಣೆ, ಪ್ರಾಣಿಗಳಿಗೆ ಮೂಲಭೂತ ಅವಶ್ಯಕತೆಗಳು ಕೇವಲ ಮೂರು. ಆಹಾರ, ನಿದ್ರೆ, ಮೈಥುನ ಆದರೆ ವಿಕಾಸಗೊಳ್ಳುತ್ತಿದ್ದ ಹಾಗೆಯೇ ಮನುಷ್ಯ ಸಂಘಜೀವಿಯಾದ, ಕುಟುಂಬ ಜೀವಿಯಾದ, ಕುಟುಂಬದ ರಕ್ಷಕನಾದ, ಕುಟುಂಬದವರಿಗಾಗಿ ಆಹಾರ ಹೊಂದಿಸಲು ಪ್ರಯತ್ನಿಸಿದ, ಜೊತೆ ಜೊತೆಗೆ Struggle For Existence, And Survival Of Fittest ಎಂಬುದನ್ನು ಬಹುಬೇಗ ಅರಿತುಕೊಂಡ. ಹಾಗಾಗಿ ಆತನ ಜೀವನ ಕುರಿತ ಈ ಎಲ್ಲಾ ಪ್ಲಾನ್‌ಗಳನ್ನು ಕಾರ್ಯರೂಪಕ್ಕಿಳಿಸಲು ಭಾಷೆಯ ಅಗತ್ಯವಿತ್ತು. ಆರಂಭದಲ್ಲಿ ಸಂಕೇತಗಳು, ವಿಶಿಷ್ಟ ಧ್ವನಿಗಳು, ಕಾಕುಗಳು, ಆಂಗಿಕ ಭಾಷೆಗಳು ಕೊಂಚ ಸಹಾಯ ಮಾಡಿದವು. ಆದರೂ ಅಷ್ಟೇ ಸಾಲದೆಂಬಂತೆ ಆತ ಭಾಷೆಯನ್ನು ಸಂಶೋಧಿಸಿದನೆನ್ನಬಹುದು.

KEYWORDS: ಮಹಿಳಾ ಅಭಿವ್ಯಕ್ತಿ, ಸ್ತ್ರೀ ಸಂವೇದನೆ, ಮಹಿಳಾ ಅನುಭವ, ಮಹಿಳಾ ಬರವಣಿಗೆ, ಮಹಿಳಾ ಸಂಸ್ಕೃತಿ, ಭಾಷಾ ವೈವಿಧ್ಯತೆ.

* **ರೇಖಾ,** ಸಂಶೋಧನಾ ವಿದ್ಯಾರ್ಥಿ, ಶ್ರೀನಿವಾಸ ವಿಶ್ವವಿದ್ಯಾಲಯ, ಮುಕ್ಕ, ಮಂಗಳೂರು.

** **ಡಾ. ನರೇಂದ್ರ ರೈ ದೇರ್ಲ,** ಮಾರ್ಗದರ್ಶಕರು, ಶ್ರೀನಿವಾಸ ವಿಶ್ವವಿದ್ಯಾಲಯ, ಮುಕ್ಕ, ಮಂಗಳೂರು.

ಭಾಷೆಯನ್ನು ಬಳಸಲು ನಿರ್ದಿಷ್ಟ ಉದ್ದೇಶಗಳಿವೆ:

ಮುಖ್ಯ ಉದ್ದೇಶವೆಂದರೆ ಸಹಜವಾಗಿ ತನ್ನನ್ನು ವ್ಯಕ್ತಪಡಿಸಲು, ಒಬ್ಬರ ಭಾವನೆಗಳನ್ನು ತಿಳಿಸಲು, ಕೆಲವೊಮ್ಮೆ ಬಯಕೆಯನ್ನು ವ್ಯಕ್ತಪಡಿಸಲು ಅಥವಾ ಸಹಾಯಕ್ಕಾಗಿ ಪ್ರಾರ್ಥಿಸಲು ಮಾನವರು ತಮ್ಮ ಆಲೋಚನೆಗಳನ್ನು ದೇಹಭಾಷೆಯ ಮೂಲಕ ಏಕಾಂಗಿಯಾಗಿ ಆದರೆ ಗಾಯನ ಶಬ್ದಗಳು ಅಥವಾ ಪದಗಳೊಂದಿಗೆ ಸಂಯೋಜಿಸುತ್ತಾರೆ. (ಭಾಷೆ: ಡಾ. ಸಂತೋಷ ಹಾನಗಲ್ಲ. ಮುನ್ನುಡಿಯಿಂದ)

ಭಾಷೆಯ ಉಗಮದ ಬಗ್ಗೆ ಸಂಶೋಧನೆ ಮಾಡಿದ ಮಹನೀಯರು ಅನೇಕ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಅದರಲ್ಲಿ ಭಾಷೆಯು ಜನ್ಮಜಾತಯೆಂಬುದೂ ಆಗಿದೆ (ಸ್ಟೀವನ್ ಪಿಂಕ್) ಇದನ್ನು ನೋಡಿದಾಗ ಗಮನಿಸಬೇಕಾದ ಅಂಶವೆಂದರೆ ಹುಟ್ಟಿದಾಗ ಇರುವ ಪರಿಸರ, ಪೋಷಕರು, ಸುತ್ತಮುತ್ತಲ ಪರಿವೇಶಗಳು ಆ ಮಗುವಿಗೆ ಒಂದು ಭಾಷೆಯನ್ನು ಕಲಿಸುತ್ತವೆಯೇ ಹೊರತು ಭಾಷೆ ಜನ್ಮಜಾತವಾದುದಲ್ಲ. ಆದರೆ ಮನುಷ್ಯನಿಗೆ ಜನ್ಮದಿಂದಲೂ ಭಾಷೆ ಕಲಿಯುವ ಹಂಬಲವಿರುತ್ತದೆಂಬುದು ಮಾತ್ರ ಸತ್ಯ. ಉದಾಹರಣೆಗೆ ಮೋಗ್ಲಿ ಎಂಬ ಅನಿಮೇಷನ್ ಚಲನ ಚಿತ್ರದಲ್ಲಿ ತೋಳಗಳೊಂದಿಗೆ ಬದುಕುವ ಮಗುವಿಗೆ ತೋಳಗಳ ಅಭಿವ್ಯಕ್ತಿ ವಿಧಾನವೇ ಬರುತ್ತದೆಯೇ ವಿನಃ ಆ ಮಗು ಮನುಷ್ಯರ ಮಗುವೆಂಬ ಜನ್ಮಜಾತ ಕಾರಣಕ್ಕೆ ಆ ಮಗುವಿಗೆ ಪೋಷಕರ ಭಾಷೆ ಬರುವುದಿಲ್ಲ. ಹಾಗಾಗಿ ಭಾಷೆಯ ಜನ್ಮಜಾತ ಎಂಬ ವಾದ ಅಷ್ಟು ಸರಿಯಲ್ಲ. ಬದಲಿಗೆ ಭಾಷೆಯು ಸಹವಾಸದಿಂದ ಬರುತ್ತದೆ.

ಇನ್ನು ಕನ್ನಡ ಭಾಷೆಯ ವಸ್ತು ವಿಧಾನಗಳ ವ್ಯವಸ್ಥೆಯು ಸಾರ್ವಜನಿಕರ ಮನಸ್ಸಿನಲ್ಲಿರುವ ಎಲ್ಲದರ ಪ್ರತಿಬಿಂಬವಾಗಿದೆ. ಭಾಷೆಯು ಮಾನವ ಪ್ರಜ್ಞೆಯನ್ನು ರೂಪಿಸುವ ಸೃಷ್ಟಿಕರ್ತನೆನ್ನಲಾಗಿದೆ. ಈ ಸಿದ್ಧಾಂತದ ಪ್ರತಿನಿಧಿ ಹತ್ತೊಂಭತ್ತನೇ ಶತಮಾನದ ಮೊದಲ ಮೂರನೇ ಪ್ರಸಿದ್ಧ ಜರ್ಮನ್ ಭಾಷಾ ಶಾಸ್ತ್ರಜ್ಞ ವಿಲ್ಹೆಲ್ಮ್ ಹಂಬೋಲ್ಟ್ (ಭಾಷೆ: ಡಾ ಸಂತೋಷ ಹಾನಗಲ್ಲ). ಈತನ ಪ್ರಕಾರ ಭಾಷೆ ಜನರ ಸ್ವಭಾವದಲ್ಲಿ ಅಂತರ್ಗತವಾಗಿರುತ್ತದೆ ಮತ್ತು ಅವರ ಆಧ್ಯಾತ್ಮಿಕ ಶಕ್ತಿಗಳ ಅಭಿವೃದ್ಧಿ ಮತ್ತು ವಿಶ್ವ ದೃಷ್ಟಿಕೋನದ ರಚನೆಗೆ ಅನುಗುಣವಾಗಿದೆ. ಭಾಷೆಯು ಜನರ ಆತ್ಮದ ಬಾಹ್ಯಾಭಿವ್ಯಕ್ತಿಯಾಗಿದೆ, ಜನರ ಭಾಷೆ ಅದರ ಆತ್ಮವಾಗಿದೆ. ವಿಭಿನ್ನ ಜನರ ನಡುವೆ ಭಾಷೆಗಳ ರಚನೆಯು ವಿಭಿನ್ನವಾಗಿದೆ (ಭಾಷೆ: ಡಾ ಸಂತೋಷ ಹಾನಗಲ್ಲ).

ಮೇಲಿನ ವಿಷಯವನ್ನು ಕೊಂಚ ವಿವರಿಸೋಣ. ಈ ವಾದದ ಪ್ರಕಾರ ಭಾಷೆಯು ಜನರ ಅಭಿವ್ಯಕ್ತಿಯ ಆತ್ಮವಾಗಿದೆ ಎಂದು ಹೇಳಿದೆ.

ಇಲ್ಲಿ ಜನರು ಅಂದಾಗ ಸ್ತ್ರೀ ಪುರುಷ ಮಕ್ಕಳು ಎಲ್ಲರೂ ಬರುತ್ತಾರೆ. ಆದ್ದರಿಂದ ಭಾಷೆಯ ವಿಚಾರಕ್ಕೆ ಬಂದರೆ ಸ್ತ್ರೀ ಪುರುಷ ಭೇದಭಾವವಿಲ್ಲದೆ ಎಲ್ಲರೂ ಅಭಿವ್ಯಕ್ತಿ ಕ್ರಿಯೆಯಲ್ಲಿ ಪಾಲುಗೊಳ್ಳುವಂತಾಗಬೇಕು. ಪುರುಷನಿಗೆ ದೊರೆತಷ್ಟೇ ಪ್ರಾಧಾನ್ಯತೆಯ ಸ್ತ್ರೀಗೂ ದೊರಕಬೇಕು, ಅದು ವ್ಯವಹಾರ ವಿರಲಿ, ಆಡುಮಾತಿರಲಿ, ಸಾಹಿತ್ಯವಿರಲಿ, ಸಂಶೋಧನೆಯಿರಲಿ, ಆಡಳಿತವಿರಲಿ, ಅಲ್ಲಿ ಪುರುಷ ಮತ್ತು

ಮಹಿಳೆಯರು ಎಲ್ಲರಿಗೂ ಸಮಾನ ಅವಕಾಶವಿರಬೇಕು.

ಆದರೆ ಕನ್ನಡ ಭಾಷೆಗೆ ಸಂಬಂಧಿಸಿದಂತೆ ಭಾಷೆಯ ವೈವಿಧ್ಯತೆಯಲ್ಲಿ ಹೆಣ್ಣು ಭಾಷೆಗೆ ಅವಕಾಶವಿದೆಯೇ, ಆ ಭಾಷೆಯ ಅನನ್ಯತೆಯೇನೆಂಬುದನ್ನು ನೋಡೋಣ.

ಕನ್ನಡ ಭಾಷೆಗೆ ಬಂದರೆ ನಮ್ಮ ಕನ್ನಡ ಭಾಷೆಗೆ ಸರಿ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವನ್ನು ಹೇಳಬಹುದು. ಭಾಷಾ ವಿದ್ವಾಂಸರು ಬೇರೆಬೇರೆ ದಾಖಲೆಗಳನ್ನು ನೀಡಿ ಈ ಇತಿಹಾಸವನ್ನು ಇನ್ನೂ ಹಿಂದಕ್ಕೆ ಕೊಂಡೊಯ್ಯುತ್ತಿದ್ದಾರೆ. ಆದರೆ ಬಹುಜನರು ಒಪ್ಪಿಕೊಂಡಂತೆ ನಾವು ಎರಡು ಸಾವಿರ ವರ್ಷಗಳ ಗೆರೆಯನ್ನು ದಾಟದಿರುವುದು ಒಳ್ಳೆಯದು. ಕಾರಣ ನಮಗೆ ಸಿಗುವ ನಿಖರ ಆಧಾರಗಳು ಈ ಮೂಲವನ್ನು ಬೆಂಬಲಿಸುತ್ತವೆ.

ಇಷ್ಟು ದೊಡ್ಡ ಇತಿಹಾಸವಿರುವ ಈ ಭಾಷೆಯಲ್ಲಿ ಪಂಪ, ರನ್ನ, ಬಸವಣ್ಣ, ಕುಮಾರವ್ಯಾಸ ರಾಘವಾಂಕನಂತಹ ಮಹಾ ಕವಿಗಳು, ದಾರ್ಶನಿಕರು, ಪಂಡಿತರು ಕಂಡು ಬಂದರೂ ಸ್ತ್ರೀ ಧ್ವನಿ ಅಷ್ಟಾಗಿ ಕಂಡುಬರುವುದಿಲ್ಲ.

ಇದಕ್ಕೆ ಕಾರಣವನ್ನು ನಮ್ಮ ಸಮಾಜೋ ಆರ್ಥಿಕ ವ್ಯವಸ್ಥೆಯಲ್ಲಿ ಕಾಣಬಹುದು. ಭಾರತೀಯ ಸಮಾಜದಲ್ಲಿ ಹೆಣ್ಣು ಅಬಲೆ, ಆಕೆಗೆ ಸ್ವತಂತ್ರ ಅಸ್ತಿತ್ವವಿಲ್ಲ. ಆಕೆ ಕಾರ್ಯೇಷು ದಾಸಿ, ಕರಣೇಷು ಮಂತ್ರಿ, ಪೂಜ್ಯೇಷು ಮಾತಾ. ಹೀಗೆ ನಿಯಮಗಳು ಮುಂದುವರೆಯುತ್ತವೆ. ಈ ಕಾರಣಕ್ಕೆ ಶಿಕ್ಷಣದಿಂದ ವಂಚಿತಳಾದ (ಜೀವನ ಶಿಕ್ಷಣ) ಹೆಣ್ಣು ಮನೆ, ಮಕ್ಕಳು, ಅವರ ಊಟ ಇತ್ಯಾದಿಗಳಿಗೆ ಮೀಸಲಾಗಿ ಉಳಿದಳು.

ಹಾಗಾಗಿ ಭಾರತೀಯ ಸಮಾಜದ ವ್ಯವಸ್ಥೆಯಲ್ಲಿ ಹೆಣ್ಣುಮಕ್ಕಳ ಪ್ರಾತಿನಿಧಿಕತ್ವ ಗೌಣವಾಗಿಯೇ ಇದೆ. ಆದರೆ ಕತ್ತಲಲ್ಲೂ ಸಣ್ಣ ಭರವಸೆಯ ಬೆಳಕಿರುವಂತೆ ನಮಗೆ ಇಲ್ಲಿ ಅತ್ಯಪೂರ್ವ ಸಾಧಕಿಯರು ಕಾಣುತ್ತಾರೆ.

ಕನ್ನಡ ಭಾಷೆಯಲ್ಲಿ ಮಹಿಳಾ ಧ್ವನಿಯೆನ್ನುವಾಗ ನಮಗೆ ಮೊದಲು ಕಾಣಬರುವ ಸ್ತ್ರೀ ಧ್ವನಿ ಶರಣೆ ಅಕ್ಕಮಹಾದೇವಿಯದ್ದು. ಈಕೆ ನಮಗೆ ಬಸವಯುಗದ ಕೊಡುಗೆ ಹನ್ನೆರಡನೇ ಶತಮಾನದ ಬಸವಣ್ಣನಿಂದ ಆರಂಭವಾಗಿ ಕುಮಾರವ್ಯಾಸನವರೆಗೆ ಪ್ರವಹಿಸುವ ಈ ಯುಗದಲ್ಲಿ ನಮಗೆ ಅಕ್ಕ ಕಂಡುಬರುತ್ತಾಳೆ. ಈ ಯುಗದಲ್ಲಿ ಕಾವ್ಯದ ದಿಕ್ಕು ಬದಲಾಯಿತು,ಅದರ ಜೊತೆಗೆ ಕಾವ್ಯಾಭ್ಯಾಸಿಗಳ ಆಸಕ್ತಿಯೂ ಬದಲಾಯಿತು. ಕಾವ್ಯದ ದಿಕ್ಕು ಮಾರ್ಗದಿಂದ ದೇಸಿಗೆ ಬದಲಾದರೆ ಆಸಕ್ತಿಯು ದೀರ್ಘ ಮಹಾಕಾವ್ಯಗಳ ಬದಲಿಗೆ ಸರಳವಾದ ಗದ್ಯಗಂಧಿಯಾದ ವಚನಗಳು ರೂಪುಗೊಂಡವು. ಕಾವ್ಯವು ಕೇವಲ ಪಂಡಿತರಿಗೆ ಮಾತ್ರವಲ್ಲ ಜನಸಾಮಾನ್ಯರ ಕಷ್ಟ. ಕಣ್ಣೀರಿಗೂ ಕಾವ್ಯವು ಧ್ವನಿಯಾಗಬೇಕು, ಸೋತವರ ಪರ ನಿಲ್ಲಬೇಕುಎಂಬ ನಿಜವಾದ ಪ್ರಜಾಸತ್ತಾತ್ಮಕ ನೆಲೆಗೆ ಕಾವ್ಯ ತಿರುಗಿದ್ದೇ ಅಕ್ಕಮಹಾದೇವಿ, ಸತ್ಯಕ್ಕ, ಸಂಕವ್ವೆ, ಮುಂತಾದ ಹೆಂಗಸರೂ ಕನ್ನಡ ಕಾವ್ಯಲೋಕವನ್ನು ಪ್ರವೇಶಿಸಿದರು. ಬಸವಣ್ಣ ಹೇಳಿದ ಮಾತು ನಾನು ಒಲಿದಂತೆ ಹಾಡುವೆ ಎಂಬುದು ಇವರಿಗೆ ಶಕ್ತಿ

ನೀಡಿತು.

ಇಂತಹ ಮಹಿಳಾಮಣಿಗಳಲ್ಲಿ ನಮಗೆ ಅಕ್ಕಮಹಾದೇವಿ ಮುಖ್ಯಳಾಗುತ್ತಾಳೆ. ಅಕ್ಕ ಕೇವಲ ಶರಣೆಯೋ, ವಚನಗಾರ್ತಿಯೋ ಮಾತ್ರವಲ್ಲದೆ ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನೆಲದಲ್ಲಿ ಮೂಡಿದ ಪ್ರಖರ ಸೂರ್ಯ, ಬಂಡಾಯ, ಹೆಣ್ಣುತನ, ಭಕ್ತಿ, ವೈರಾಗ್ಯ, ಮಾತೃತ್ವ, ಕವಿತ್ವ ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆ ಎಂತಯ್ಯ

ಅಕ್ಕ ಕೇಳೆ ನಾನೊಂದು ಕನಸ ಕಂಡೆ.

ಮೊಲೆ ಮುಡಿ ಬಂದರೆ ಹೆಣ್ಣೆಂಬರು ಗಡ್ಡ ಮೀಸೆ ಬಂದರೆ ಗಂಡೆಂಬರು.

ಈ ಸಾವ ಕೆಡುವ ಗಂಡನೊಯ್ದು ಒಲೆಯೊಳಗಿಕ್ಕು.. ಮುಂತಾದ ವಚನಗಳಲ್ಲಿ ಅಕ್ಕನ ಬೇರೆ ಬೇರೆ ಮುಖಗಳು ಕಾಣುತ್ತವೆ.

ಹೀಗೆ ಹಲವು ವಿಭಾಗಗಳಲ್ಲಿ ಅಕ್ಕ ಕಂಡುಬರುತ್ತಾಳೆ, ಇವಳೇ ಕನ್ನಡದ ಮೊದಲ ಕವಯಿತ್ರಿ ಚತುರ ಕವಿತೆ, ಆಧ್ಯಾತ್ಮ ಮತ್ತು ಗದ್ಯಕವಿತ್ವಗಳ ಸಮ್ಮಿಳನ ಇಲ್ಲಿ ಕಂಡುಬರುತ್ತದೆ. ಸಾಂಪ್ರದಾಯಿಕ ಸಮಾಜದ ಸಂಕೋಲೆಗಳನ್ನು ಮುರಿದೊಗೆದು ಲಗ್ನ ಸಂಸ್ಥೆಯನ್ನು ಅತಿಗಳೆದು ಚೆನ್ನಮಲ್ಲಿಕಾರ್ಜುನನೆಂಬ ಲೋಕ ಪತಿಯನ್ನೇ ಪತಿಯಾಗಿ ವರಿಸಿ ಆಕೆ ಮಾಡಿದ ಉಗ್ರಸಾಧನೆ, ಪಡೆದ ಸಿದ್ದಿ ಆಶ್ಚರ್ಯಕರವಾದುದು. ಸಂಸಾರಹೇಯ, ಸತಿಪತಿಭಾವ, ಆತ್ಮನಿವೇದನೆಯ ಭಾವ ಇವಳಲ್ಲಿ ಕಾಣಬಹುದು (ಕನ್ನಡ ಸಾಹಿತ್ಯ ಚರಿತ್ರೆ: ರಂ. ಶ್ರೀ ಮುಗುಳಿ)

ಅಕ್ಕಮಹಾದೇವಿ ಯಿಂದಲೇ ಕನ್ನಡದಲ್ಲಿ ಮೊದಲಿಗೆ ಹೆಣ್ಣು ಭಾಷೆ ಉಗಮವಾಯಿತೆನ್ನಬಹುದು. ಭಾಷೆಯಲ್ಲಿ ಹೆಣ್ಣು ಗಂಡುಯೆಂಬ ಭೇದವುಂಟೇ ಉಂಟು. ಗಂಡು ಸ್ವಭಾವತಃ ಗಡಸು, ಆತನದ್ದು ಝೇಂಕಾರ ಧ್ವನಿ, ಹೆಣ್ಣು ಕುಸುಮ ಕೋಮಲೆ ಆಕೆಯದ್ದು ಮಾತೃ ಧ್ವನಿ. ರನ್ನ ತನ್ನ ಕಾವ್ಯದ ವಿಶೇಷವನ್ನು ಹೇಳುವಾಗ. ತನ್ನದು ಟಠಡಢಣ ಎನ್ನುತ್ತಾನೆ. ತನ್ನ ಕಾವ್ಯವನ್ನು ವಿಮರ್ಶಿಸುವವನಿಗೆ ಎಂಟೆದೆ ಬೇಕು ಎನ್ನುತ್ತಾನೆ. ಇದು ಗಂಡು ಕಾವ್ಯ, ಆ ಕಾವ್ಯದಲ್ಲಿ ಮಾಧುರ್ಯವಿರಬಹುದು ಶೃಂಗಾರವಿರಬಹುದು, ವೀರವೂಯಿರಬಹುದು. ಆದರೆ ಆ ಕಾವ್ಯದ ಮೂಲ ಸ್ರೋತ ಗಂಡುಧ್ವನಿ. ಹಾಗಾಗಿಯೇ ಪಂಪ ರನ್ನ ಜನ್ನ ಎಲ್ಲರೂ ವೀರರಸ ಪ್ರಧಾನವಾದ ವಸ್ತುವನ್ನೇ ಕಾವ್ಯದ ವಸ್ತುವಾಗಿ ಆಯ್ದುಕೊಂಡರು. ಬಹುಶಃ ಪುರಾಣವನ್ನು ಹೆಣ್ಣು ಬರೆಯುವುದಾಗಿದ್ದರೆ ಪುರಾಣದ ರೂಪವು ಬದಲಾಗುತ್ತಿತ್ತೇನೋ.

ಅದರ ಅಕ್ಕನ ವಚನಗಳಲ್ಲಿ ಸ್ತ್ರೀಪರ ಕಾಳಜಿಗಳು ಕಾಣುತ್ತವೆ, ಸ್ತ್ರೀಯರ ದೇಹವನ್ನು ತಿನ್ನಲು ಗಂಡುಗಳು ಕಾಯುತ್ತಿವೆ ಎಂಬ ಚಿಂತನೆಯಿದೆ. ಅದು ಈ ಸಮಾಜದ ತಪ್ಪು ಅದನ್ನು ತಿದ್ದಿಕೊಳ್ಳಿರಣ್ಣಾಯೆಂದು ಬೇಡುತ್ತಾಳೆ.

ಈ ದೇಹದ ಅವಯವಗಳ ಆಧಾರದಿಂದ ಗಂಡು–ಹೆಣ್ಣು ಭೇದ ಮಾಡಿದ್ದೀರಿ.

ಆದರೆ ಒಳಗಿರುವ ಆತ್ಮನಿಗೆ ಲಿಂಗಸೂತಕವಿಲ್ಲವೆನ್ನುತ್ತಾಳೆ.

ಮೂಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು ಈ ವಚನದಲ್ಲಿ ಆಕೆಯ ಆತ್ಮನಿವೇದನೆ ಕಾಣುತ್ತದೆ. ಅಯ್ಯಾ ನಾನು ಹೆಂಗೂಸಲ್ಲ, ಅಯ್ಯಾ ನಾನು ಸೂಳೆಯಲ್ಲ.

ಕಾರಣ ಈ ಲೋಕದ ನಿಯಮಗಳು ನನಗಿಲ್ಲ. ಹಾಗಾಗಿಯೇ ಆಕೆ ಲೋಕ ಪತಿಯಾದ ಚೆನ್ನಮಲ್ಲಿಕಾರ್ಜುನನನ್ನು ಮದುವೆಯಾಗುತ್ತಾಳೆ. ಇದು ಹೇಗೆಯೆಂದು ಕೇಳಿದವರಿಗೆ ಆಕೆ ನಿವೇದಿಸುತ್ತಾಳೆ. ನೀನೊಲಿದವರು ಒಡಲುಗೊಂಡಿದ್ದರೆನಬೇಡ.

ನನ್ನದು ಲೋಕದ ಬಳಕೆದಾರರ ತೆರವಲ್ಲ ಎನ್ನುತ್ತಾಳೆ ಆಕೆಯ ಇಡೀ ಜೀವನವೇ ಹೆಣ್ಣುಭಾಷೆಯ ಉಳಿಯುವಿಕೆಗಾಗಿ ಮಾಡಿದ ಹೋರಾಟ.

ಇವಳ ಜೊತೆಗೆ ಇನ್ನೂ ಹಲವಾರು ಜನ ವಚನಕಾರ್ತಿಯರು ಬರುತ್ತಾರೆ.

ಮುಂದೆ ನಮಗೆ ಸಿಗುವ ಇನ್ನೊಬ್ಬ ಮಹತ್ವದ ಕವಯಿತ್ರಿ ಸಂಚಿಯ ಹೊನ್ನಮ್ಮ. ಈಕೆಯದೂ ಕೂಡಾ ಹೋರಾಟದ ಬದುಕು. ಅರಸನಲ್ಲಿ ಹೂಳಿಗದವಳಾಗಿ ಸೇರುವ ಈಕೆ ತನ್ನ ಚಾಟೂಕ್ತಿ, ಕವಿತ್ವದಿಂದ ಗಮನ ಸೆಳೆಯುತ್ತಾಳೆ. ಈಕೆಯದು ಬೋಧನೆಯ ಮಾದರಿಯ ಕಾವ್ಯ, ಹದಿಬದೆಯ ಧರ್ಮ ಈಕೆ ತನ್ನ ಕಾವ್ಯದಲ್ಲಿ ಹೆಣ್ಣು ಜನ್ಮದ ಶ್ರೇಷ್ಠತೆಯನ್ನು ಸಾರುತ್ತಾಳೆ.

ಪೆಣ್ಣುಪೆಣ್ಣೆಂದೇಕೆ ಬೀಳುಗಳೆವಿರಿ.
ಕಣ್ಣುಕಾಣದ ಗಾವಿಲರು.

ಎಂದೂ ಪೆಣ್ಣು ಪೆತ್ತವರು ಪೆರ್ಚುವರು ಎಂದೂ ಸಾರುವ ಮೂಲಕ ಹೆಣ್ಣು ಕುಲದ ಪ್ರಬಲ ಪ್ರತಿಪಾದಕಿಯಾಗಿ ಕಾಣುತ್ತಾಳೆ.

ಮುಂದೆ ಭಾರತವು ಬ್ರಿಟಿಷರ ವಸಾಹತುವಾದ ನಂತರ ದೊಡ್ಡ ಬದಲಾವಣೆಯಾಯಿತು. ಆದರೂ ಹೆಣ್ಣಿನ ಸಂಕೋಲೆಗಳು ತುಂಡಾಗಲಿಲ್ಲ. ದೊಡ್ಡ ಆಲದ ಮರೆಯಲಿರುವ ಬೇರೆಯಾವ ಮರವೂ ಜನರ ಕಣ್ಣಿಗೆ ಕಾಣಲಾರದು. ಹಾಗೆಯೇ ಖ್ಯಾತವ್ಯಕ್ತಿಯ ಮಡದಿಯಾದವಳೂ ಸ್ವತಃ ಪ್ರತಿಭಾವಂತ, ಸಮರ್ಥಳಾದರೂ ಅವಳ ಕೀರ್ತಿ ಪತಿಯ ಕೀರ್ತಿಯ ನೆರಳಿನದಾಗಿಯಷ್ಟೇ ಕಂಡುಬರುತ್ತದೆ. ಈ ಮಾತಿಗೆ ಅಪವಾದವಾಗಿ ನಿಂತ ಅಪರೂಪದ ಮಹಿಳೆ ಶ್ರೀಮತಿ ತಿರುಮಲೆ ರಾಜಮ್ಮನವರು. ಕನ್ನಡದ ಭೀಷ್ಮ ಪತ್ರಿಕಾ ಕರ್ತ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಧೀರ ಎಲ್ಲವುಗಳ ಜೊತೆಗೆ ಕನ್ನಡ ಸಾಹಿತ್ಯದಲ್ಲಿ ಮೇಲ್ಮಟ್ಟ ಸ್ಥಾನವನ್ನು ಪಡೆದಿರುವ ತಿ.ತಾ ಶರ್ಮರ ಪತ್ನಿಯಾಗಿದ್ದು ಕೇವಲ ಸಾಹಿತಿಯ ಪತ್ನಿಯಾಗಿ ಉಳಿಯದೆ ಭಾರತಿಯಾಗಿ ಪತಿಯಷ್ಟೇ ಕೀರ್ತಿಯನ್ನು, ಗೌರವವನ್ನೂ ಪಡೆದ ಶ್ರೇಯಸ್ಸು ರಾಜಮ್ಮನವರಿಗೆ ಸಲ್ಲುತ್ತದೆ. (ಸಾಲು ದೀಪಗಳು: ತಿರುಮಲೆ ರಾಜಮ್ಮ. ಲೇ. ಎಚ್. ಎಸ್. ಪಾರ್ವತಿ)

ನಾನು ಪ್ರತಿಪಾದಿಸಿದ ಹೆಣ್ಣು ಧ್ವನಿಯ ವಿಚಾರವನ್ನು ಮೇಲಿನ ಪ್ಯಾರ ಸಮರ್ಥವಾಗಿ ಮಂಡಿಸುತ್ತಿದೆ. ಇದು ತಿರುಮಲೆ ರಾಜಮ್ಮ ಒಬ್ಬರ ಕತೆಯಾಗಿರದೆ ಸಮಸ್ತ ಭಾರತೀಯ ನಾರಿಯರ ಕತೆಯೂ ಆಗಿದೆ. ಗಂಡಸಿನ ಆಶ್ರಯದಲಿ ಬಾಳುತ್ತಿದ್ದರೂ ತನ್ನದೇ ಸ್ವಂತಿಕೆಯನ್ನು ಬಿಟ್ಟು ಕೊಡದೆ, ಅಲ್ಲಿಯೂ ಶ್ರೇಷ್ಠತೆಯನ್ನು ಸಾಧಿಸುವ ಭಾಷೆಯೇ ಹೆಣ್ಣು ಭಾಷೆ. ಇದು ಹೆಣ್ಣಿನ ಅಸ್ಮಿತೆ. ಸ್ವಾತಂತ್ರ್ಯಾನಂತರದಲ್ಲಿ ಇಂತಹ ನೂರಾರು ಮಾದರಿಗಳು ದೊರಕುತ್ತವೆ. ಸ್ವಾತಂತ್ರ್ಯ ಪೂರ್ವದಲ್ಲಿ ಸಮಾಜ ಮತ್ತು ಸಾಹಿತ್ಯದಲ್ಲಿ ನಿಜವಾದ ಅರ್ಥದ ಮಡಿವಂತಿಕೆಯಿದ್ದುದು ಹೌದು. ಈ ಮಡಿವಂತಿಕೆಯು ಹೆಣ್ಣನ್ನ ಲೋಪಾಮುದ್ರೆಯಾಗಿಸಿ ಕಮಂಡಲುವಿನೊಳಗೆ ನೀರಾಗಿಸಿಟ್ಟದ್ದೂ ಹೌದು. ಇದು ಪುರಾಣ ಮಾತ್ರವಲ್ಲದೆ ಜನಪದರಲ್ಲೂ ಇಂತದೇ ಮಡಿವಂತಿಕೆಯಿತ್ತು.

ಜಾಣೆಯಾಗಿರು ಮಲ್ಲಿಗೆ ನೀ ಹೆಣ್ಣಾಗಿ ಬಂದಿರುವೆ ಇಲ್ಲಿಗೆ ಎಂಬ ಮಾತು ಹೆಣ್ಣು ಸ್ವತಂತ್ರಳಲ್ಲ ಎಂಬ ಅಭಿಪ್ರಾಯವನ್ನೇ ಪ್ರತಿಬಿಂಬಿಸುತ್ತಿತ್ತು. ಆದರೆ ಅಕ್ಷರ ಸಂಸ್ಕೃತಿಯ ಪರಿಚಯವಾದ ನಂತರ ತಿರುಮಲೆ ರಾಜಮ್ಮ, ಜಯದೇವಿತಾಯಿ ಲಿಗಾಡೆ, ಟಿ. ಸುನಂದಮ್ಮ, ತ್ರಿವೇಣಿ, ಅನುಪಮ ನಿರಂಜನ, ಕೊಡಗಿನ ಗೌರಮ್ಮ, ಗಿರಿಬಾಲೆ, ಬೆಳಗೆರೆ ಜಾನಕಮ್ಮ, ಮುಂತಾದವರು ಹೆಣ್ಣು ಧ್ವನಿಯನ್ನು ಪ್ರಚುರಪಡಿಸಿದರು.

ನಂತರದ ಕಾಲದಲ್ಲಿ ಪತ್ರಿಕೆಗಳ ಸಾಹಿತ್ಯ ಸಂಪದ, ಪುರವಣಿಗಳು, ಮುಂದೆ ಲಂಕೇಶ್ ಪತ್ರಿಕೆಗಳಂತವು ಹೆಣ್ಣುಮಕ್ಕಳಿಗೆ ಹೆಚ್ಚು ಹೆಚ್ಚು ಅವಕಾಶ ಕೊಟ್ಟವು.

ಈ ನೆಲೆಯಲ್ಲಿ ಕಾದಂಬರಿ ಕ್ಷೇತ್ರದ ಬಹುದೊಡ್ಡ ಹೆಸರಾದ ತ್ರಿವೇಣಿಯವರನ್ನು ಗಮನಿಸಬೇಕು. ಕಾದಂಬರಿಗೆ ಮನೊವಿಜ್ಞಾನದ ವಸ್ತುವಿನ ಚೆಲುವು ತೊಡಿಸಿದ ತ್ರಿವೇಣಿಯವರ ಸಣ್ಣ ವಯಸ್ಸಿನ ಬಹುದೊಡ್ಡ ಸಾಧನೆಯನ್ನು ಗಮನಿಸಬೇಕು. ಬೆಕ್ಕಿನಕಣ್ಣು, ಶರಪಂಜರ, ಕೀಲುಗೊಂಬೆ, ಹಣ್ಣೆಲೆ ಚಿಗುರಿದಾಗ, ದೂರದ ಬೆಟ್ಟ ಮುಂತಾದ ಕಾದಂಬರಿಗಳನ್ನು ರಚಿಸಿದರು. ಜೊತೆಗೆ ಹಲವಾರು ಕಥೆಗಳನ್ನೂ ಬರೆದರು. ತ್ರಿವೇಣಿಯವರು ತಾವು ಕಂಡದ್ದು, ಕೇಳಿದ್ದು ಅನುಭವಿಸಿದ್ದನ್ನು ತಮ್ಮ ಕೃತಿಗಳಲ್ಲಿ ಕಾಣಿಸುತ್ತಿದ್ದರು ಅವರ ಸೂಕ್ಷ್ಮ ಆಲೋಚನಾ ಶಕ್ತಿ, ಸಂವೇದನಾ ಶೀಲತೆ, ಮಾನವೀಯತೆಗಳು ಅವರ ಕೃತಿಗಳಲ್ಲಿ ಕಾಣಸಿಗುತ್ತದೆ. ಹೆಣ್ಣಿನ ಅನುಭವ ಸೀಮಿತ, ಅವರು ನಾಲ್ಕುಗೋಡೆಗಳ ಮಧ್ಯೆ ಇರಬೇಕು. (ಸಾಲುದೀಪಗಳು ತ್ರಿವೇಣಿ ಲೇ. ಎನ್. ವಿ. ವಿಮಲ) ಎಂದರೂ ಅವರು ಜನರ ನಡುವೆ ಅನುಭವ ಪಡೆದರು.

ಇಲ್ಲಿಂದ ಮುಂದೆ ಕನ್ನಡದಲ್ಲಿ ಹೆಣ್ಣಿನ ಧ್ವನಿ ಬಹು ಸದೃಢವಾಗಿ ಸಶಕ್ತವಾಗಿ ಕೇಳಿತು. ಅನುಪಮಾ ನಿರಂಜನ ವೈದ್ಯ ಸಾಹಿತ್ಯ. ಉಷಾ ನವರತ್ನ ರಾಂ. ನುಗ್ಗೇಹಳ್ಳಿ ಪಂಕಜ, ಸಾಯಿಸುತೆ ಮುಂತಾದವರ ಜನಪ್ರಿಯ ಪ್ರಕಾರ, ಎಂ. ಕೆ. ಇಂದಿರಾರಂತವರ ಸೃಜನಶೀಲತೆಯಿಂದ ಕೂಡಿದ ಸೊಗಸಾದ ಕೃತಿಗಳು, ಫಣಿಯಮ್ಮ ನಂತಹ ಸಮಾಜದ ಮೇಲೆ ಬೆಳಕು ಬೀರುವ ಕಾದಂಬರಿಗಳು ಇಲ್ಲಿ ಮುಖ್ಯವಾಗುತ್ತದೆ.

ಈ ನಂತರದಲ್ಲಿ ಕನ್ನಡದಲ್ಲಿ ಲಂಕೇಶ್ ಪತ್ರಿಕೆಯ ಉಗಮದ ನಂತರ ವೈದೇಹಿ ಸಾರಾ ಅಬೂಬಕರ್, ಎಚ್. ಎಸ್. ಶ್ರೀಮತಿ, ಶಶಿಕಲಾ ವೀರಯ್ಯ ಸ್ವಾಮಿ, ಲಲಿತಾ ಸಿದ್ದಬಸವಯ್ಯ, ಸಬಿಹಾ ಭೂಮಿಗೌಡ, ಪ್ರತಿಭಾ ನಂದಕುಮಾರ್, ತುಳಸಿ ವೇಣುಗೋಪಾಲ್, ಭಾನು ಮುಷ್ತಾಕ್, ಯು. ಷರೀಫಾ, ದು. ಸರಸ್ವತಿ, ಎಚ್. ಎಲ್. ಪುಷ್ಪಾ, ವಿನಯ ಒಕ್ಕುಂದ, ರೇಣುಕಾ ರಮಾನಂದ್, ನಾಗರೇಖಾ ಗಾಂವ್ಕರ್, ಮಹಾದೇವಿ ಕೆ. ಪಿ, ಪೂರ್ಣಿಮಾ ಸುರೇಶ್, ದಿವ್ಯಾ ಶ್ರೀಧರ ರಾವ್ ಮುಂತಾದ ಮಹಿಳೆಯರು ಹೆಣ್ಣು ಧ್ವನಿಯನ್ನು ಸಶಕ್ತವಾಗಿ ಪ್ರತಿಪಾದಿಸುತ್ತಿದ್ದಾರೆ. ಇವರಲ್ಲೂ ಸಾರಾ ಮತ್ತು ವೈದೇಹಿಯವರಂತೂ ಮಹಿಳಾ ಚಳುವಳಿಯ ಪ್ರಾತಿನಿಧಿಕ ಕವಿಗಳಾಗಿದ್ದಾರೆ. ಸಾರಾ ಮುಸ್ಲಿಂ ಸಮಾಜದ ಲೋಪದೋಷಗಳನ್ನು ಕೆಚ್ಚೆದೆಯಿಂದ ಹೊರಹಾಕಿದರೆ, ವೈದೇಹಿ ನಿನಗೆ ಕವಿತೆ ಗೊತ್ತಾ ಎಂದು ಕೇಳಿದವರಿಗೆ, ನನಗೆ ತಿಳಿಸಾರು ಗೊತ್ತು ಎಂಬ ಮೂಲಕ ತಣ್ಣಗಿನ ಪ್ರತಿಭಟನೆ ಮಾಡುವ ಮೂಲಕ ಗಮನ ಸೆಳೆಯುತ್ತಾರೆ ಅಡುಗೆ ಮನೆಯ ಹುಡುಗಿ, ಮಗಳಿಗೆ ಮುಂತಾದ ಕವಿತೆಗಳನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ಅವರ ಅಸ್ಪೃಶ್ಯರು ಕಾದಂಬರಿಯಂತೂ ಸಮಕಾಲಿನ ಸಮಾಜದ ಲೋಪದೋಷಕ್ಕೆ ಕನ್ನಡಿ ಹಿಡಿಯುತ್ತದೆ. ಸಾರಾರವರ ಚಂದ್ರಗಿರಿ ತೀರದಲ್ಲಿ ಕಾದಂಬರಿ ಕೂಡಾ ಇದೇ ವರ್ಗಕ್ಕೆ ಸೇರುತ್ತದೆ.

ಪ್ರತಿಭಾ ನಂದಕುಮಾರ್, ಮಮತಾ ಜಿ. ಸಾಗರ ಮುಂತಾದವರ ಭಾಷೆಯೇ ಕತ್ತಿಯಲುಗಿನಂತೆ ಫಳಫಳ ಹೊಳೆಯುತ್ತದೆ. ಇದೇ ಪರಂಪರೆಯ ಮುಂದುವರಿಕೆಯನ್ನು ರೇಣುಕಾ ರಮಾನಂದ್, ನಾಗರೇಖಾ ಗಾಂವ್ಕರ್, ಮಹಾದೇವಿ ಕೆ. ಪಿ., ಪೂರ್ಣಿಮಾ ಸುರೇಶ್ ದಿವ್ಯಾ ಶ್ರೀಧರರಾವ್‌ರಂತಹ ಹೊಸ ತಲೆಮಾರಿನ ಲೇಖಕಿಯರಲ್ಲಿಯೂ ಕಾಣುತ್ತಿದ್ದೇವೆ. ಪೂರ್ಣಿಮಾ ಸುರೇಶ್‌ರವರು ವರ್ತಮಾನದ ಬಹುಮುಖ್ಯ ಕವಯಿತ್ರಿಯಾಗಿದ್ದಾರೆ. ಬಾಲ್ಯದಿಂದ ಇದು ಲೇಖಕಿ ಕಂಡಿರುವ ಮುಟ್ಟಿರುವ ಲೋಕ, ಮಹಿಳಾಲೋಕ, ಅದು ಒಂದು ರೀತಿ ಕತ್ತಲೆಯ ಲೋಕ, ಸ್ವಾತಂತ್ರ್ಯ ಕಂಡಿರದ ಲೋಕ, ಬದುಕಿನ ಸೂಕ್ಷ್ಮಾತಿ ಸೂಕ್ಷ್ಮ ಭಾವಗಳಿಗೆ ಸ್ಪಂದಿಸುವ ಆದರೆ ಹೆಜ್ಜೆ ಹೆಜ್ಜೆಗೂ ತುಳಿತ, ಅಸಡ್ಡೆ, ಅವಮಾನ, ನೋವುಗಳನ್ನು ಬಳುವಳಿಯಾಗಿ ಪಡೆದುಕೊಂಡ ಜೀವವೆಂದರೆ ಹೆಣ್ಣು ಜೀವ. ಅಮ್ಮ ಅಜ್ಜಿ ಊರ ದೇವಾಲಯದ ಬಳಿ ಕಂಡ ದೇವದಾಸಿಯರು ಬಡ ಹೆಣ್ಣು ಮಕ್ಕಳು, ಮೂಢನಂಬಿಕೆಗಳಿಗೆ ಈಡಾದ ಬಲಿಯಾಗಿಸಿದ ಹೆಣ್ಣು ಜೀವಗಳು. ಹೊರಗೆ ಪ್ರಗತಿಪರರೆಂದುಕೊಂಡು ಮನೆಯೊಳಗೆ ಜೀತದ ಹೊಸ ನಮೂನೆಗಳನ್ನು ಅನುಭವಿಸುವ ಮಹಿಳೆಯರು. ಇವರೆಲ್ಲರ ಲೋಕ ಅವರ ಕಾವ್ಯದ ಧ್ವನಿಲೋಕ. ಹೀಗಾಗಿ ಇದನ್ನೇ ಸೂಚ್ಯವಾಗಿ ಅವರ ಕಾವ್ಯಗಳಲ್ಲಿ ವಿವಿಧ ಪ್ರತಿಮೆ ರೂಪಕಗಳ ಮೂಲಕ ಕಾಣಿಸುವ ಪ್ರಯತ್ನ ಮಾಡುತ್ತಲೇ ಇದ್ದಾರೆ. ಇದು ಪ್ರಯತ್ನ ಅನ್ನೋದಕ್ಕಿಂತ ಅವರೊಳಗೆ ಸಹಜವಾಗಿ ಸುರಿಸುವ ನಾಭಿಧ್ವನಿ.

ರೇಣುಕಾ ರಮಾನಂದರ ಕವಿತೆಯಲ್ಲಿ ಕಾಣುವ ಸ್ತ್ರೀ ಗುಣ

ತನ್ನನ್ನು ಪೋಷಿಸಿ ಬೆಳೆಸಿದ ಸುತ್ತಮುತ್ತಲನ್ನು ಮೊತ್ತವಾಗಿಟ್ಟುಕೊಂಡು ಕವಿತೆ

ಬರೆವ ರೇಣುಕಾರ ಬಹುತೇಕ ಪದ್ಯಗಳು ಊರುಕೇರಿಯ ಹೆಣ್ಣಿನ ಬದುಕು ವಿವರಗಳ ಕಾರಣಕ್ಕಾಗಿ ಹೆಚ್ಚು ಗಮನ ಸೆಳೆಯುತ್ತವೆ. ಶಾಲೆಗೆ ಹೋಗಲಾಗದೇ ಬೆಟ್ಟಕ್ಕೆ ಸೌದೆಗೆ ಹೋಗುವ ಹುಡುಗಿಯರ ಅಸಹಾಯಕತೆ, ಒನಕೆ ಕುಟ್ಟುತ್ತ ಜಡ್ಡುಗಟ್ಟಿಹೋದ ಅವ್ವನ ಹಸ್ತ, ಊರಿನಲ್ಲಿಯೇ ಉಳಿದುಹೋದ ಒಂಟಿ ಮುದುಕಿ ಸಾಕಿಕೊಂಡ ಬೆಕ್ಕು, ಬೆಸ್ತನ ಬೆಲ್ಲದಚ್ಚಿನಂತಹ ಹೆಂಡತಿ, ಅವ್ವ ಮೆಹನತ್ ಮಾಡಿದ ಗದ್ದೆಯಲ್ಲಿಗ ಗೆದ್ದಲು ಸಾಮ್ರಾಜ್ಯ, ಮುಂತಾದ ಸಾಲುಗಳು ಅಂತರಂಗವನ್ನು ಕೆಣಕಿ ಕಾಡುತ್ತವೆ. ಕಾಳಜಿಯ ಒಕ್ಕಣೆಯನ್ನು ಜೊತೆಗಿಟ್ಟುಕೊಂಡೇ ಸ್ತ್ರೀ ಬದುಕಿನ ವಿಷಾದ, ಸುಖ–ದುಃಖದ ವಿವರಗಳನ್ನು ತೆರೆದಿಡುತ್ತಾ ಹೋಗುವ ರೇಣುಕಾರ ಕವಿತೆಗಳು ಕರಾವಳಿಯ ಸತ್ವಯುತ ಭಾಷಾಸೊಗಡನ್ನೂ ಒಳಗೊಂಡ ಕಾರಣಕ್ಕಾಗಿ ಇನ್ನಷ್ಟು ಎದೆಗೆ ತಾಕುತ್ತವೆ.

ನಾಗರೇಖಾ ಅವರ ಕಥೆ ಕವಿತೆಗಳಲ್ಲಿ ಅಸಮಾನತೆಯ ಕುರಿತು ನಿರಾಕರಣೆ ಇದೆ. ಒತ್ತಾಯದ ಹೇರುವಿಕೆಯ ಕ್ರಮಗಳನ್ನು ವಿರೋಧಿಸುತ್ತವೆ. ಆತ್ಮಾಭಿಮಾನ ಆತ್ಮಘನತೆ ಅವರ ಕಥೆ ಕವನಗಳಲ್ಲಿ ಢಾಳಾಗಿ ಕಾಣಿಸುತ್ತವೆ. ಅವಳಿಲ್ಲದೇ ಜಗದ ಬೆಳಕಿಗೆ ಕಣ್ಣು ತೆರೆದವನ ಹುಡುಕಿ ಸೋತಿದ್ದೇನೆ ಎನ್ನುವ ಅವರ ಕವಿತೆಗಳ ಸಾಲುಗಳಾಗಲಿ ಅಥವಾ ಕೇವಲ ಗಂಡನಾದವನ ಬಗ್ಗೆ ನನಗೆ ಮರುಕವಿದೆ ಎನ್ನುವ ಸಾಲುಗಳಾಗಲಿ ಹೆಣ್ಣನ್ನು ಎರಡನೇ ದರ್ಜೆಯಾಗಿಸಿ ನೋಡುವ ಕ್ರಮವನ್ನು ಪ್ರಶ್ನಿಸುತ್ತವೆ. ಇಂದಿಗೂ ಕೂಡಾ ಸ್ತ್ರೀ ಪರವಾದ ಸಾಮಾಜಿಕ ನಿಲುವುಗಳನ್ನು ಮುಂದಿನ ಜನಾಂಗಕ್ಕೆ ದಾಟಿಸುವಲ್ಲಿ ನಾವು ಸಫಲರಾಗಿಲ್ಲ. ಚಿಂತನೆಗಳಲ್ಲಿ ಹೊಸತನ ತೋರುವಿಕೆ ಕೇವಲ ಬರವಣಿಗೆ ಅಥವಾ ಭಾಷಣಗಳಿಗೆ ಸೀಮಿತವಾಗಿದೆ. ಬದುಕು ಅದೇ ಚಪ್ಪಲಿಯಡಿಯ ಚೇಳಿನಂತಿದೆ ಎಂಬುದನ್ನು ಅವರ 'ಚಪ್ಪಲಿಯಡಿಯ ಚೇಳು' ಕವಿತೆ ಹೇಳುತ್ತದೆ. 'ಜೀವವಿಲ್ಲದ ಒಣ ಎಲೆಯೆಂದವರ ಕಡೆಗೊಮ್ಮೆ ನಲ್ಮೆಯ ನಗೆ ಬೀರಬೇಕು'. ಸಾಲುಗಳು ಸ್ತ್ರೀ ಘನತೆಯನ್ನು ನಿರಾಕರಿಸುವ ಮನಸ್ಸುಗಳಿಗೆ ಪ್ರಶ್ನಿಸುತ್ತಲೇ ಪ್ರೀತಿಯ ಪಾಠವನ್ನು ಹೇಳುತ್ತವೆ.

ಆಯತಪ್ಪಿ ಫಳಾರನೇ
ಕೆಳಗುರುಳಿದಾಗ
ಬಿದ್ದರೂ ಗುದ್ದಿದರೂ
ನೆಗ್ಗಬಹುದು, ಮತ್ತೆದ್ದು
ನಗಲೂಬಹುದು
ಲೋಹದ ಹಣತೆ
ಆದರೆ ಚೂರಾದದ್ದು

ಮೆದುಮೈಯ ಮಣ್ಣಹಣತೆ ಸಾಲುಗಳಲ್ಲಿ ಅವರ ಚಿಂತನೆಯ ಇನ್ನೊಂದು ಮಗ್ಗುಲು ಕಾಣಿಸುತ್ತದೆ. ಸ್ತ್ರೀ ಬದುಕಿನ ವ್ಯಾಪ್ತಿಯನ್ನು ಸೀಮಿತ ಪರಧಿಯಾಗಿಸಿದ ವ್ಯವಸ್ಥೆಯನ್ನು ವಿರೋಧಿಸಿಯೂ, ಸ್ತ್ರೀತ್ವದ ಸಾಮಾಜಿಕ ನಿಲುವುಗಳ ನೆಲೆಯಲ್ಲಿ ಸಹಜ ಬದುಕಿನ ಹಾದಿಯನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯವನ್ನು ಕಾಣಿಸುತ್ತವೆ

ಮಹಾದೇವಿ ಕೆ. ಪಿ.ಯವರು ತಮ್ಮ ಕವನದ ಧ್ವನಿಯ ಬಗ್ಗೆ ಹೀಗೆ ಹೇಳುತ್ತಾರೆ.

ಕವಿತೆ ಬರೆಯಲೆಂದೇನೂ ಅಲ್ಲ ಈ ಕವಿತೆಗಳ ಬರೆದದ್ದು ಮತ್ತು ಅವು ಕವಿತೆಗಳಾಗುವುದು ಕೂಡ ಅವುಗಳನ್ನು ಬದುಕಾಗಿಸಿಕೊಂಡಾಗಲೇ.

ಮೈತುಂಬಾ ಮಣ್ಣು ಮೆತ್ತಿಕೊಂಡು ಸುತ್ತಮುತ್ತಲು ನೋಡುವುದು ಮಣ್ಣ ಘಮಲು ಅಮಲು ತೋರಿಸಲೆಂದೇನೂ ಅಲ್ಲ. ಲಾಗಾಯ್ತಿನಿಂದ ತಾಯಿಗೆ ಮಗು ತೋರುತ್ತಾ ಬಂದ ಪ್ರತಿಕ್ರಿಯೆಯ ಮರುಸೃಷ್ಟಿಯದು.

ಬಂಜರಿನಲ್ಲಿ ಬೆಳೆ ಬೆಳೆಯ ಬೇಕಾಗುವುದರ ಹಿಂದೆ ಇರುವುದು ಕೇವಲ ಸಾಮರ್ಥ್ಯ ಮತ್ತು ಪ್ರದರ್ಶನವಲ್ಲ. ಅನಿವಾರ್ಯತೆಯನ್ನು ಪ್ರೀತಿಯಾಗಿಸಿಕೊಂಡ ರೀತಿ ಅದು. ಹಾಗಾದಾಗ ಮಾತ್ರ ಬೆಳೆದ ಬೆಳೆಯಲ್ಲಿ ಸತ್ವ ಉಳಿಯುವುದು..

ಹೆಣ್ಣಾಗಿ ಹುಟ್ಟುವುದು ಯಾರ ಪರವೂ ಅಲ್ಲದ, ವಿರುದ್ಧವೂ ಅಲ್ಲದ ಒಂದು ಪ್ರಕೃತಿ ಸಹಜ ಆಗುಹೋಗುವಿಕೆ. ಅದನ್ನು ಸ್ವಂತಕ್ಕೂ ಪರಕ್ಕೂ ಅರ್ಥ ಮಾಡಿಸುತ್ತಾ ಸಾಗಬೇಕಾದದ್ದೇ ದಾರಿ ಮತ್ತು ಗುರಿ.

ನಿರಂತರ ಉಸಿರಾಟದ ಬದುಕಿದು. ಒಳಗಡೆ ಸೇರುವಾಗಿನ ತಂಪಾದ ಉಸಿರು ಹೊರಬರುವಾಗ ಬದುಕಿನ ಬಿಸಿ ಅಂಟಿಕೊಂಡಿರುತ್ತದೆ. ಉಸಿರ 'ಆಟ'ದಲ್ಲಿ ಉಸಿರಿನ ಗಾಂಭೀರ್ಯ ಮತ್ತು ಬದುಕಿನ ಆಟಗಳೆರಡೂ ಇವೆ. ಅದರಲ್ಲಿ ಭಾಗವಹಿಸಲೇ ಬೇಕಾದಾಗ ನಿಸರ್ಗದಾಟದ ನಿಯಮಕ್ಕನುಗುಣವಾಗಿ ನಮ್ಮನ್ನು ನಾವು ಅಣಿಗೊಳಿಸಿಕೊಳ್ಳಬೇಕಾಗುತ್ತದೆ...

ಇನ್ನು ನಾಗರೇಖಾರವರ ಕಥೆ ಲೇಖನಗಳು ಸ್ತ್ರೀ ಪುರುಷರ ಸಂಕೀರ್ಣ ಸಂಬಂಧಗಳ ಜೊತೆಗೆ ಸಂಸ್ಕೃತಿಕರಣದ ಹೆಸರಿನಲ್ಲಿ ಸ್ತ್ರೀ ಅನುಭವಿಸುತ್ತಿರುವ ಮತ್ತು ಅನುಭವಿಸುವಂತೆ ಮಾಡುವ ವ್ಯವಸ್ಥೆಯ ವಿರುದ್ಧ ಅಕ್ಷರಗಳು ಉಕ್ಕುತ್ತವೆ. ವರ್ತಮಾನದ ಸಾಮಾಜಿಕ ಒತ್ತಡಗಳು, ಕೌಟುಂಬಿಕ ವಿಘಟನೆಗಳು, ಸ್ತ್ರೀ ಶೋಷಣೆಗಳು, ಅಸಮಾನತೆಯ ಅವಮಾನಗಳು ಇತ್ಯಾದಿಗಳ ಕುರಿತು ಅವರ ಮೌನಗೊಳ್ಳೊಂದು ಅಂತರ್ಧಾನ, ಸ್ಟಾಕ್ ಹೋಂ ಸಿಂಡ್ರೋಮ್, ಶುಗರ್ ಬೇಬಿ, ನಾನು ಇತ್ಯಾದಿ ಕಥೆಗಳು ಕಟ್ಟಿಕೊಟ್ಟಿವೆ.

ಶ್ರೀಮತಿ ಕೆ. ಪಿ. ಮಹಾದೇವಿಯವರ ಕವಿತೆಗಳನ್ನು ಓದುವಾಗ ನಮಗೆ ದೊರಕುವ ಸೂಚನೆಗಳಿವು.

ಎಲ್ಲಾ ಕವಿತೆಗಳು ಹಲವು ಶಾಖೋಪಶಾಖೆಗಳನ್ನು ಹೊಂದಿದ ತನಗಷ್ಟೇ ಅಲ್ಲದೆ ಮಿಕ್ಕವರಿಗೂ ಉಳಿಸಲೆಂದೇ ವಿಭಿನ್ನ ಬಣ್ಣದ ಹೂ ಹಣ್ಣುಗಳನ್ನು ಬಿಡುವ ಒಂದೇ ಕಾಂಡದ ಮರದಂತೆ ಕಾಣುತ್ತವೆ. ಈ ಹೂ ಹಣ್ಣು ಪತ್ರಗಳ ಹಿಂದಿನ ದಾರಿಯನ್ನು ಅನುಸರಿಸಿ ಹೋದರೆ ನಮಗೆ ಸಿಗುವುದು ಮರವನ್ನು ಹಗಲು ಇರುಳು ಗಟ್ಟಿಯಾಗಿ ಹಿಡಿದು ನಿಲ್ಲಿಸಲು ಹೋರಾಡುವ ಹಿರಿಯ ತಾಯಿ ಬೇರು ಮತ್ತು

ಜೊತೆಗಿರುವ ತಂತು ಬೇರುಗಳು. ಕೆಸರ ಪಾದಗಳು ಮತ್ತು ಅದರಿಂದ ದೂರವಿದ್ದು ಹೂ ಹಣ್ಣು ಎತ್ತಿ ಹಿಡಿದ ಕೈ.

ಹೆಣ್ಣು ಬದುಕು ಬೇಕಾಗಿರುವುದು ಗಂಡಿನ ಪರ ಅಥವಾ ವಿರುದ್ಧ ಅಲ್ಲದ ಅವನೂ ಸೇರಿದಂತೆ ಎಲ್ಲರ ಜೊತೆಯಲ್ಲಿ. ಅವಳ ಪಾತ್ರಕ್ಕೆ ಕರ್ತವ್ಯ ಇರುವಂತೆಯೇ ಸಾಧ್ಯತೆಗಳಿವೆ ಪ್ರೀತಿ, ಫಲವಂತಿಕೆಗಳಿವೆ. ಜೊತೆಗೆ ಅನುಭಾವಗಳಿವೆ. ಸೌಂದರ್ಯದ ಹಲವು ಮಗ್ಗುಲುಗಳೂ ಇವೆ. ಕೈಗೆಟುಕಿಸಿಕೊಳ್ಳಬಹುದಾದ ಆಕಾಶದೆತ್ತರದ ಸ್ವಾತಂತ್ರ್ಯವಿದೆ. ತಕರಾರುಗಳಿಂದ ಬದುಕನ್ನು ಹಾಳಾಗಿಸಿಕೊಳ್ಳದಿರುವ ಇತ್ಯಾತ್ಮಕ ದಾರಿಗಳಿವೆ. ತನ್ನನ್ನು ಹೋಲಿಸಬೇಕಾದದ್ದು ಗಂಡಿನೊಂದಿಗಲ್ಲ. ತಾನು ಸ್ಪರ್ಧಿಸಬೇಕಾದದ್ದು ಗಂಡಿನೊಂದಿಗಲ್ಲ. ಎದುರಾಗಿ ನಿಲ್ಲುವುದರ ಮೂಲಕ ಅಲ್ಲ. ತನ್ನ ಹೋಲಿಕೆ ಸಾಧ್ಯವಾಗುವುದು ಕೇವಲ ಗಾಳಿ, ಬೆಳಕು, ಮಣ್ಣು, ನೀರು, ಗಾಳಿಗಳನ್ನು ಹೊಂದಿರುವ ಪ್ರಕೃತಿಯೊಂದಿಗೆ. ಹಾಗಾಗಿ ಸಮಾನತೆ ಎಂಬುದೊಂದು ಪ್ರಶ್ನೆಯೇ ಅಲ್ಲ. ಹಾಗಂತ ಇದು ಗಾಳಿಯಂತಲ್ಲ. ನೆಲಮುಟ್ಟದ್ದಲ್ಲ. ಸ್ತ್ರೀ ಮನೋಧರ್ಮದ ಪೊರೆಯುವಿಕೆ, ಪೋಷಣೆಗಳನ್ನು ಹೊಂದಿದ್ದು...

ಈ ಪೋಷಣೆ ಕೇವಲ ಮನುಷ್ಯನಿಗೆ ಸೀಮಿತವಲ್ಲ. ಸಕಲ ಜೀವಿ, ನಿರ್ಜೀವಿಗಳಲ್ಲೂ ಏನನ್ನೂ ಕಾಣ ಹೊರಡುವುದು.

ಈ ಎಲ್ಲದರ ಹಿಂದೆ ಶರಣರ ಬದುಕಿನ, ಸಂದೇಶಗಳ ಪ್ರೇರಣೆಯಿದೆ. ಸ್ವಂತದ ಓದು, ಅನುಭವವಿದೆ, ಪಂಥದ ಸೀಮೆ ಇರದ ಒಳ್ಳೆಯದನ್ನು ಸ್ವೀಕರಿಸುವ ತೆರೆದ ಮನಸ್ಸಿದೆ. ಮಾತು ನಡೆಗಳ ನಡುವಿರಬೇಕಾದ ಅತ್ಯಂತ ಕಡಿಮೆಯಂತರದ ತುಡಿತವಿದೆ...

ಹೀಗಾಗಿ ಕವಿತೆಗಳು ಸ್ತ್ರೀ ಸಂವೇದನೆಯ ವಿಭಿನ್ನ ಮಾರ್ಗವನ್ನು ಕಾಣಿಸುತ್ತವೆಯೇ ಹೊರತು ಸ್ತ್ರೀ ಸಮಾನತೆ, ಹಕ್ಕುಗಳಂತಹ ವಿಷಯಗಳನ್ನು ಅಂತಃಕರಣದಿಂದ ನೋಡಬಯಸುತ್ತವೆ.

ದಿವ್ಯಾ ಶ್ರೀಧರ್ ರಾವ್ ಇತ್ತೀಚೆಗೆ ಕಾದಂಬರಿ ಕ್ಷೇತ್ರದಲ್ಲಿ ಬಹುದೊಡ್ಡ ಸಾಧನೆ ಮಾಡಿದ್ದಾರೆ.

ದಿವ್ಯಾ ಅವರ ಕಾದಂಬರಿಗಳಲ್ಲಿ ಸಾಮಾನ್ಯವಾಗಿ ಹೆಣ್ಣಿನ ಅಂತರಾಳದ ತುಮುಲಗಳನ್ನು ಹೆಚ್ಚಾಗಿ ಕಾಣಬಹುದು. ಒಬ್ಬ ಹೆಣ್ಣಾಗಿ, ತಾನು ಆ ಪಾತ್ರದೊಳಗೆ ಇಳಿದು ಚಿತ್ರಿಸಬಹುದೆಂಬ ಕಾರಣಕ್ಕೂ ಇರಬಹುದೇನೋ ಹೆಣ್ಣಿನ ಮನಸ್ಸಿನ ಭಾವನೆಗಳು ನೈಜತೆಯನ್ನು ಕಾಪಾಡಿಕೊಂಡಿವೆ. ಪೌರಾಣಿಕ ಪಾತ್ರಗಳಾದ ಕರ್ಣನ ಮಡದಿ ವೃಷಾಳಿ ಮತ್ತು ಮಹಾತಾಯಿ ಗಾಂಧಾರಿಯ ಭಾವ ಸಂಘರ್ಷಗಳು ಕಾಲ್ಪನಿಕವಾದರೂ ಎಲ್ಲಿಯೂ ಪಾತ್ರಗಳ ಎಲ್ಲೆ ಮೀರದಿರುವುದು ಶ್ಲಾಘನೀಯ. ಅವರ ಸಾಮಾಜಿಕ ಕಾದಂಬರಿಗಳಲ್ಲಿ ಬರುವ ಗುಬ್ಬಿಯ ಪಾತ್ರ ಇಡೀ ಸಮಾಜದ ಅವ್ಯವಸ್ಥೆಗೆ ಹಿಡಿದ ಕನ್ನಡಿಯಾದರೆ, ಪುಟ್ಟಿ ಮತ್ತು ಸೌಮ್ಯಳ ಪಾತ್ರದಲ್ಲಿ ಸಮಾಜವಿನ್ನೂ

ಒಳ್ಳೆಯತನ ಕಾಯ್ದುಕೊಂಡ ಬಗೆಯನ್ನು ತೋರಿಸಿಕೊಡುತ್ತದೆ. ನಾನು ಗಮನಿಸಿದಂತೆ ದಿವ್ಯಾ ಅವರ ಬರವಣಿಗೆಯ ಭಾವ ತೀವ್ರತೆ ಓದುಗನ ಕಣ್ಣಂಚು ಒದ್ದೆಯಾಗುವಂತೆ ಮಾಡುವಲ್ಲಿ ಗೆದ್ದಿದೆ. ಛೆ.. ಹೀಗಾಗಿ ಹೋಯ್ತಲ್ಲಾ ಎಂಬ ವಿಷಾದದ ಭಾವ ಬಹಳಷ್ಟು ಸನ್ನಿವೇಶಗಳಲ್ಲಿ ಓದುಗನನ್ನು ಆವರಿಸುತ್ತದೆ. ಹೆಣ್ಣಿನ ಸೂಕ್ಷ್ಮ ಸಂವೇದನೆಗಳನ್ನು ಅಷ್ಟೇ ಸೂಕ್ಷ್ಮವಾಗಿ ಬರವಣಿಗೆಯ ರೂಪಕ್ಕೆ ಇಳಿಸಿರುವುದು ಇವರ ಬರವಣಿಗೆಯ ವಿಶೇಷ. ಸಮಾಜದ ಕ್ರೂರತ್ವ, ಆ ಕ್ರೂರತ್ವ ಮಹಿಳೆಯೊಬ್ಬಳ ಮೇಲೆ ಬೀರುವ ಪರಿಣಾಮ, ಆ ಪರಿಣಾಮದಿಂದಾಗುವ ಮಾನಸಿಕ ನಷ್ಟ ಇವೆಲ್ಲವನ್ನು ನಾವು ದಿವ್ಯಾ ಅವರ ಕಾದಂಬರಿ ಮತ್ತು ಕತೆಗಳಲ್ಲಿ ಕಾಣಬಹುದು.

ಈ ಎಲ್ಲವನ್ನೂ ಗಮನಿಸಿದಾಗ ನಮಗೆ ಕನ್ನಡ ಭಾಷೆಯಲ್ಲಿ ಹೆಣ್ಣು ಧ್ವನಿ ಸ್ಪಷ್ಟವಾಗಿ ಗೋಚರಿಸುತ್ತದೆ. ಇದು ನಮಗೆ ಭರವಸೆಯ ಬೆಳಕು.

ಹೆಣ್ಣುಮಕ್ಕಳು ಈ ಕ್ಷೇತ್ರಕ್ಕೆ ಬರಬಾರದು, ಆ ಕ್ಷೇತ್ರಕ್ಕೆ ಬರಬಾರದು ಎಂಬ ಧೋರಣೆಯೇ ತಪ್ಪು. ಈ ಶೀಲಪ್ರಜ್ಞೆಯನ್ನು ನಿರ್ಲಕ್ಷಿಸಿ ನಡೆಯುತ್ತಿರುವ ಸಂಗತಿಯನ್ನು ಈ ಕೆಳಗಿನ ಕವನ ಹೇಳುತ್ತದೆ.

ಕತ್ತಲೆಯಲ್ಲಿ ಬೆತ್ತಲೆ ತಿರುಗುತ್ತಿರುವ ನಮ್ಮ ಶೀಲ ಕನ್ನಿಕೆಗೆ ಬೆಳಕಿನ ಸೀರೆ ಉಡಿಸುವುದಿದೆ ಬರುವಿರಾ. ಪುರುಷ ಪ್ರಧಾನ ವ್ಯವಸ್ಥೆಯನ್ನು ನಿರಾಕರಿಸುವ ಕವನ ಹೀಗಿದೆ.

ಹಾಗೂ ಹೀಗೂ ಹೆಣ್ಣು ಬುಗುರಿಯಾಡುವ ಈ ಗಂಡಸರ ಕುಂಡೆಗೆ ಜಾಡಿಸಿ ಒದೆಯಬೇಕು.

ಇವು ಉದಾಹರಣೆಗಳು. ಈ ಬಗೆಯ ಬಂಡಾಯವನ್ನು ಅಕ್ಕಮಹಾದೇವಿಯಲ್ಲಿಯೇ ಕಾಣುತ್ತೇವೆ. ಈ ಸಾವಕೆಡುವ ಗಂಡನೊಯ್ದು ಒಲೆಯೊಳಗಿಕ್ಕು, ಈ ತಣ್ಣಗೆ ಚಳಿ ಹುಟ್ಟಿಸುವಂತಹ ಬಂಡಾಯವನ್ನು ಈಗಿನ ಕವಯಿತ್ರಿಯರಲ್ಲೂ ಕಾಣುತ್ತೇವೆ ಇವು ಮುಂದಿನ ಹೆಣ್ಣುಧ್ವನಿಯ ಭವಿಷ್ಯದ ಸೂಚಕಗಳು. ಈ ಸೂಚನೆಗಳು ನಮಗೆ ಆಶಾವಾದವನ್ನು, ಭರವಸೆಯನ್ನು ತೋರುತ್ತವೆ.

ಉಪಸಂಹಾರ

ಭಾಷೆಯೆಂಬುದು ಮನುಷ್ಯನು ತನ್ನ ಆಲೋಚನೆಗಳನ್ನು ಮತ್ತೊಬ್ಬರಿಗೆ ತಲುಪಿಸಿ ತನ್ನ ಇಂಗಿತವನ್ನು ಈಡೇರಿಸಿಕೊಳ್ಳುವ ಒಂದು ಕಾರಣಕ್ಕಾಗಿ ಕಂಡುಕೊಂಡ ವ್ಯವಸ್ಥೆಯೆಂದು ನೋಡಿದೆವು. ಈ ದೃಷ್ಟಿಯಿಂದ ನೋಡಿದರೆ ಭಾಷೆಗೆ ಯಾವ ಮಡಿವಂತಿಗೆಯೂ ಬೇಕಾಗಿಲ್ಲ. ಆದರೆ ಭಾಷೆಯ ಬಳಕೆ, ಭಾಷೆಯ ಪದಸಂಪತ್ತಿನ ಮೂಲಕ ಕಾಣುವ ಮೇಲು ಕೀಳು ಮುಂತಾದವನ್ನು ಗಮನಿಸಿದರೆ ಭಾಷೆಯು ಸರ್ವರನ್ನೂ ಸಮಾನವಾಗಿ ತಲುಪುತ್ತಿಲ್ಲ. ಜಾತಿ, ವರ್ಣ ಕಸುಬುಗಳಿಗೆ ತರತಮದಿಂದ ಕೂಡಿದ ಬೇರೆಬೇರ ಭಾಷೆಗಳು ಬಳಕೆಯಲ್ಲಿರುವುದನ್ನು ಕಾಣಬಹುದು.

ಇದರ ಮುಂದುವರಿದ ರೂಪ ಹೆಣ್ಣುಮಕ್ಕಳಿಗೂ ಭಾಷೆಯಿಲ್ಲದಂತೆ ಮಾಡಿರುವುದು ಕಂಡುಬರುತ್ತದೆ.

ಆದರೆ ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನ ನೇತೃತ್ವದಲ್ಲಿ ನಡೆದ ಸಾಮಾಜಿಕ ಕ್ರಾಂತಿಯ ಪರಿಣಾಮ ವ್ಯವಸ್ತೆಯಲ್ಲಿ ಆಮೂಲಾಗ್ರ ಬದಲಾವಣೆ ತಂದಿತು. ಇದರ ಜೊತೆಗೆ ಸ್ತ್ರೀಯರಿಗೂ ಸೂಕ್ತ ವೇದಿಕೆ ದೊರಕಿತು. ಹೀಗೆ ಮುಂಚೂಣಿಗೆ ಬಂದವಳೇ ಅಕ್ಕಮಹಾದೇವಿ. ನಂತರ ಕನ್ನಡ ಭಾಷೆಯಲ್ಲಿ ಹೆಣ್ಣು ಧ್ವನಿ ದೊಡ್ಡದಾಗಿ ಕೇಳಿಬಂದಿತು. ಈಗ ಆ ಧ್ವನಿಯು ಅರಿವು, ಸಮಾನತೆಯನ್ನು ಬಿತ್ತರಿಸುವುದರ ಜೊತೆಗೆ ಬಹುತೇಕ ದೊಡ್ಡ ಮಹಿಳಾ ಬಂಡಾಯದ ಧ್ವನಿಯಾಗಿಯೂ ಮೂಡಿಬಂದಿತು.

ಈ ನಂತರದಲ್ಲಿ ಭಾರತವು ಬ್ರಿಟೀಷರ ವಸಾಹತುವಾದ ನಂತರ ಇಂಗ್ಲೀಷ್ ಶಿಕ್ಷಣವು ಈ ಹೆಣ್ಣು ಧ್ವನಿಗೆ ಇನ್ನಷ್ಟು ಅವಕಾಶ ನೀಡಿತು. ಅಖಂಡ ಭಾರತದ ಕಲ್ಪನೆ, ಇಂಗ್ಲೀಷ್, ಶಿಕ್ಷಣ, ಇಂಗ್ಲೀಷ್ ಸಾಹಿತ್ಯದ ಓದು ಹೆಣ್ಣುಮಕ್ಕಳಿಗೆ ಹೊಸದೊಂದು ಅವಕಾಶದ ಬಾಗಿಲನ್ನು ತೆರೆಯಿತು. ನಂತರ ಪತ್ರಿಕಾ ಮಾಧ್ಯಮ ನೀಡಿದ ಅವಕಾಶ, ಹೊಸ ಹೊಸ ಓದು, ಸ್ವಾತಂತ್ರ್ಯ ಚಳುವಳಿ, ಕೈಗಾರಿಕಾ ಕ್ರಾಂತಿ ನಂತರ ಸಾಹಿತ್ಯದ ಪ್ರಕಾರಗಳು. ಈ ಮೂಲಕ ಹೆಣ್ಣು ಧ್ವನಿ ವಿಶೇಷವಾಗಿ ಕೇಳಿಸುತ್ತಿದೆ.

ಪರಾಮರ್ಶನ ಗ್ರಂಥಗಳು:

1. ಮುಗುಳಿ ರಂ.ಶ್ರೀ., ಕನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು: ಉಷಾ ಸಾಹಿತ್ಯ ಮಾಲೆ.
2. ಸಿದ್ದಲಿಂಗಯ್ಯ ಜಿ.ಎಸ್. (ಸಂ.), (1994), ಸಾಲು ದೀಪಗಳು, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
3. ಸಂತೋಷ ಹಾನಗಲ್ಲ, (2014), ಭಾಷೆ, ಬೆಂಗಳೂರು.
4. ಹಂಪಿ ಕನ್ನಡ ವಿಶ್ವವಿದ್ಯಾಲಯ (ಸಂ.), (2003), ವಚನ ಸಾವಿರ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
5. ರೇಣುಕಾ ರಮಾನಂದ, (2017), ಸಂಬಾರ ಬಟ್ಟಲು ಕೊಡಿಸು, ಬೆಂಗಳೂರು: ಕಾವ್ಯಾನಂದ ಪ್ರಕಾಶನ.
6. ಮಹಾದೇವಿ ಕೆ.ಪಿ., (2019), ಆರಂಭ, ಬೆಂಗಳೂರು: ಅಭಿನವ ಪ್ರಕಾಶನ.